**ಕರ್ನಾಟಕ ವಿಧಾನಪರಿಷತ್ತಿನ ಸದಸ್ಯರಾದ ಶ್ರೀ ಪುಟ್ಟಣ್ಣ ಇವರು ನಿಯಮ 72 ರಡಿಯಲ್ಲಿ ಪ್ರಸ್ತಾಪಿಸಿರುವ ಸೂಚನೆಗೆ ಉತ್ತರ**

**ವಿಷಯ**

ಸರ್ಕಾರಿ ಪ್ರಥಮ ದರ್ಜೆ ಕಾಲೇಜುಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಬೋಧಕ/ಬೋಧಕೇತರರಿಗೆ ದಿನಾಂಕ: 01.01.2006ರಿಂದ ಜಾರಿಗೆ ಬರುವಂತೆ ಯುಜಿಸಿ ವೇತನ ಶ್ರೇಣಿಯನ್ನು ದಿನಾಂಕ: 24.12.2009ರಲ್ಲಿ ಆದೇಶ ಹೊರಡಿಸಿ ಜಾರಿಗೊಳಿಸಲಾಗಿದೆ. ಅದರಂತೆ ಸದರಿ ನೌಕರರು ವೇತನವನ್ನು ಪಡೆಯುತ್ತಿದ್ದು ಬಾಕಿ ಇರುವ 7 ತಿಂಗಳು 23 ದಿನಗಳ ಯುಜಿಸಿ ವೇತನದ ಬಾಕಿ ಹಣವನ್ನು 11 ವರ್ಷಗಳಿಂದ ಇದುವರೆವಿಗೂ ಬಿಡುಗಡೆ ಮಾಡದೆ ಇರುವ ವಿಷಯದ ಬಗ್ಗೆ ಮಾನ್ಯ ಉಪ ಮುಖ್ಯಮಂತ್ರಿಯವರು ಹಾಗೂ ಉನ್ನತ ಶಿಕ್ಷಣ, ಐ.ಟಿ. ಮತ್ತು ಬಿ.ಟಿ., ವಿಜ್ಞಾನ ತಂತ್ರಜ್ಞಾನ ಕೌಶಲ್ಯಾಭಿವೃದ್ಧಿ ಸಚಿವರ ಗಮನ ಸೆಳೆಯ ಬಯಸುತ್ತೇನೆ

**ಉತ್ತರ**

ಸರ್ಕಾರದ ಆದೇಶ ಸಂಖ್ಯೆ:ಇಡಿ:37:ಯುಎನ್ಇ:2009 ದಿನಾಂಕ:24.12.2009ರಲ್ಲಿ 2006ರ ಪರಿಷ್ಕೃತ ಯುಜಿಸಿ ವೇತನ ಶ್ರೇಣಿಯನ್ನು ವಿಸ್ತರಿಸಿ ಆದೇಶಿಸಲಾಗಿದೆ. ಅದರಂತೆ ಅರ್ಹ ಬೋಧಕರುಗಳಿಗೆ ದಿನಾಂಕ:01.01.2006 ರಿಂದ 23.12.2009ರ ವರೆಗೆ ಯುಜಿಸಿ ಬಾಕಿಯನ್ನು ಪಾವತಿಸಬೇಕಾಗಿರುತ್ತದೆ. ಸದರಿ ಅವಧಿಗೆ 2014-15 ರಿಂದ ಕಂತುಗಳ ರೂಪದಲ್ಲಿ ಒಟ್ಟು ರೂ.82080.07 ಲಕ್ಷಗಳ ಅನುದಾನವನ್ನು ಬಿಡುಗಡೆ ಮಾಡಲಾಗಿರುತ್ತದೆ. ಸರ್ಕಾರದ ಪತ್ರ ಸಂಖ್ಯೆ:ಇಡಿ:37:ಯುಎನ್ಇ:2009 ದಿನಾಂಕ:08.04.2010ರ ಪ್ರಕಾರ ದಿನಾಂಕ:01.01.2006 ರಿಂದ 23.12.2009ರಅವಧಿಯ ಯುಜಿಸಿ ಬಾಕಿ ಪಾವತಿಸುವಾಗ ತುಟ್ಟಿಭತ್ಯೆಯೊಂದಿಗೆ ಯುಜಿಸಿ ಬಾಕಿಯನ್ನು ಪಾವತಿಸಲು ಅವಕಾಶವಿರುವುದಿಲ್ಲ. ಆದರೆ ಮಹಾಲೇಖಪಾಲರು ನೀಡಿರುವ ವೇತನ ನಿಗದೀಕರಣ(Pay Slip) ಪ್ರಕಾರಬಾಕಿಯನ್ನು ಪಾವತಿಸುವಾಗ ತುಟ್ಟಿಭತ್ಯೆಯೊಂದಿಗೆ ಪಾವತಿಸಲಾಗಿರುತ್ತದೆ. ಈ ಬಗ್ಗೆ ಮಹಾಲೇಖಪಾಲರು ಲೆಕ್ಕ ತಪಾಸಣೆಯ ಅವಧಿಯಲ್ಲಿ ಆಕ್ಷೇಪಣೆ ವ್ಯಕ್ತಪಡಿಸಿರುತ್ತಾರೆ. ಈ ಹಿನ್ನಲೆಯಲ್ಲಿ ದಿನಾಂಕ:1.1.2006 ರಿಂದ 23.12.2009ರ ಅವಧಿಗೆ ತುಟ್ಟಿಭತ್ಯೆಯೊಂದಿಗೆ ಪಾವತಿಸಿರುವ ಬಾಕಿ ಮೊತ್ತವನ್ನು ತುಟ್ಟಿಭತ್ಯೆ ಹೊರತುಪಡಿಸಿದ್ದಲ್ಲಿ ಪಾವತಿಸಬೇಕಾದ ಮೊತ್ತದಲ್ಲಿ ಕಳೆದು ಹೆಚ್ಚುವರಿಯಾಗಿ ಪಾವತಿಯಾಗಿದ್ದಲ್ಲಿ ಯುಜಿಸಿ ಬಾಕಿ ಪಾವತಿಸಲು ಯಾವುದೇ ಬಾಕಿ ಇರುವುದಿಲ್ಲವೆಂದು ಹಿಂಬರಹವನ್ನು ನೀಡಲಾಗಿದೆಬಾಕಿ ಪಾವತಿಸಬೇಕಾಗಿದ್ದಲ್ಲಿ ಬಾಕಿಯನ್ನು ಪಾವತಿಸಲು ಕ್ರಮವಹಿಸಲಾಗಿದೆ.

2016ರ ಯುಜಿಸಿ ಬಾಕಿಯನ್ನು ಪಾವತಿಸುವಾಗ 2006ರ ಪರಿಷ್ಕೃತ ಯುಜಿಸಿ ವೇತನ ಶ್ರೇಣಿಯಲ್ಲಿ ತುಟ್ಟಿಭತ್ಯೆ ಹೊರತುಪಡಿಸಿ ಬಾಕಿ ವೇತನವನ್ನು ಪುನರ್‌ಲೆಕ್ಕಚಾರ ಮಾಡಿದಾಗ ಹೆಚ್ಚುವರಿಯಾಗಿ ಪಾವತಿಸಲಾಗಿರುವ ಮೊತ್ತವನ್ನು 2016ರ ಯುಜಿಸಿ ಬಾಕಿ ವೇತನದಲ್ಲಿ ಸರಿದೂಗಿಸಲು ನಿರ್ದೇಶನ ನೀಡಲಾಗಿದೆ.

ಪ್ರಸ್ತುತ ದಿನಾಂಕ:01.01.2006 ರಿಂದ 23.12.2009ರ ಅವಧಿಯ 2006ರ ಪರಿಷ್ಕೃತ ಯುಜಿಸಿ ಬಾಕಿ ವೇತನ ಲೆಕ್ಕಚಾರದಲ್ಲಿ ತುಟ್ಟಿಭತ್ಯೆಯನ್ನು ಎಂ.ಎಚ್.ಆರ್.ಡಿ. ಪತ್ರ ಸಂಖ್ಯೆ:11.05.2010ರ ಪ್ರಕಾರ ಶೇಕಡವಾರು ಪರಿಗಣಿಸುವ ಬಗ್ಗೆ ಸರ್ಕಾರದ ಪರಿಶೀಲನೆಯಲ್ಲಿದೆ.

(ಡಾ।। ಅಶ್ವಥ್ ನಾರಾಯಣ ಸಿ.ಎನ್.)
ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ
ಉನ್ನತ ಶಿಕ್ಷಣ ಸಚಿವರು

**ಇಡಿ 24 ಹೆಚ್‌ಪಿಸಿ 2020**